# ಅಭ್ಯಾಸ 10.3

10.3.1. ಕೆಳಗಿನ ಪ್ರಯೋಗಗಳಲ್ಲಿ ಬರಬಹುದಾದ ಫಲಿತಾಂಶಗಳನ್ನು ಪಟ್ಟಿ ಮಾಡಿ.

| ಪ್ರಯೋಗ | ಬರಬಹುದಾದ ಫಲಿತಾಂಶ | ಚಿತ್ರ |
|---|---|---|
| (a) ಚಕ್ರವನ್ನು ತಿರುಗಿಸುವುದು | A,B,C & D |   |
| (b) ಎರಡು ನಾಣ್ಯಗಳನ್ನು ಒಟ್ಟಿಗೆ ಟಾಸ್ ಮಾಡುವುದು | H=ಮೇಲ್ಮುಖ, T= ಕೆಳಮುಖ<br>HH,HT,TT & TH |  |

10.3.2. 1 ರಿಂದ 6 ಸಂಖ್ಯೆಗಳಿರುವ ದಾಳವನ್ನು ಉರುಳಿಸಿದಾಗ, ಕೆಳಗಿನ ಘಟನೆಗಳ ಫಲಿತಾಂಶಗಳು ಯಾವುವು ಎಂದು ಪಟ್ಟಿ ಮಾಡಿ:

(a) ಅವಿಭಾಜ್ಯ ಸಂಖ್ಯೆ, (b) ಅವಿಭಾಜ್ಯವಲ್ಲದ ಸಂಖ್ಯೆ, c) 5 ಕ್ಕಿಂತ ಹೆಚ್ಚಿನ ಸಂಖ್ಯೆ, d) 5 ಕ್ಕಿಂತ ಹೆಚ್ಚಲ್ಲದ ಸಂಖ್ಯೆ

ದಾಳವನ್ನು ಉರುಳಿಸಿದಾಗ ಬರಬಹುದಾದ ಫಲಿತಾಂಶ: 1,2,3,4,5 & 6

| (a) ಅವಿಭಾಜ್ಯ ಸಂಖ್ಯೆ | (b) ಅವಿಭಾಜ್ಯವಲ್ಲದ ಸಂಖ್ಯೆ | (c) 5 ಕ್ಕಿಂತ ಹೆಚ್ಚಿನ ಸಂಖ್ಯೆ | (d) 5 ಕ್ಕಿಂತ ಹೆಚ್ಚಲ್ಲದ ಸಂಖ್ಯೆ |
|---|---|---|---|
| 2,3 & 5 | 1, 4 & 6 | 6 | 1,2,3,4 & 5 |

A Project of www.

10.3.3. ಇವುಗಳ ಸಂಭವನೀಯತೆಯನ್ನು ಕಂಡುಹಿಡಿಯಿರಿ.

| ಪ್ರಯೋಗ/ಪ್ರಶ್ನೆ | ಬರಬಹುದಾದ ಫಲಿತಾಂಶ | ಸಂಭವನೀಯತೆ | ಚಿತ್ರ |
|---|---|---|---|
| (a) ಪ್ರಶ್ನೆ 1-(a)ನಲ್ಲಿ ಮುಳ್ಳು D ಮೇಲೆ ನಿಲ್ಲುವುದು. | A,A,B,C & D | $\frac{1}{5}$ |  |
| (b) ಚೆನ್ನಾಗಿ ಕಲೆಸಿದ 52 ಇಸ್ಪೀಟು ಎಲೆಗಳ ಗುಂಪಿನಿಂದ ಒಂದನ್ನು ತೆಗೆದರೆ ಒಂದು ಏಸ್ ಸಿಗುವುದು. | ಇಸ್ಪೀಟು ಎಲೆಗಳ ಸಂಖ್ಯೆ=52<br>ಏಸ್ ಎಲೆಗಳ ಸಂಖ್ಯೆ=4 | $\frac{4}{52}=\frac{1}{13}$ | |
| (c) ಪಕ್ಕದ ಚಿತ್ರದಿಂದ ಕೆಂಪು ಸೇಬನ್ನು ಪಡೆಯುವುದು. | ಸೇಬು ಹಣ್ಣುಗಳ ಸಂಖ್ಯೆ=7<br>ಕೆಂಪು ಸೇಬು ಹಣ್ಣುಗಳ ಸಂಖ್ಯೆ=4 | $\frac{4}{7}$ |  |

A Project of www.eShale.org

10.3.4. 1 ರಿಂದ 10 ಸಂಖ್ಯೆಗಳನ್ನು ಬೇರೆ ಬೇರೆ ಚೀಟಿಗಳ ಮೇಲೆ ಬರೆದು ಒಂದು (ಒಂದು ಚೀಟಿಯ ಮೇಲೆ ಒಂದು ಸಂಖ್ಯೆ) ಡಬ್ಬಿಯಲ್ಲಿ ಚೆನ್ನಾಗಿ ಮಿಶ್ರ ಮಾಡಿ ಇಡಲಾಗಿದೆ. ಕಣ್ಣು ಮುಚ್ಚಿ ಒಂದು ಚೀಟಿಯನ್ನು ಹೊರತೆಗೆಯಲಾಗುತ್ತದೆ. ಕೆಳಗಿನವುಗಳ ಸಂಭವನೀಯತೆ ಎಷ್ಟು?

ಚೀಟಿಯನ್ನು ಹೊರತೆಗೆದಾಗ ಬರಬಹುದಾದ ಫಲಿತಾಂಶ: 1,2,3,4,5,6,7,8,9 &10.( ಒಟ್ಟು ಸಂಖ್ಯೆಗಳು=10)

| ಪ್ರಯೋಗ/ಪ್ರಶ್ನೆ | ಆ ಸಂಖ್ಯೆಗಳು ಯಾವುವು | ಸಾಧ್ಯತೆಗಳ ಸಂಖ್ಯೆ | ಸಂಭವನೀಯತೆ |
|---|---|---|---|
| (a) ಸಂಖ್ಯೆ 6ನ್ನು ಪಡೆಯುವುದು.. | 6 | 1 | $\frac{1}{10}$ |
| (b) 6ಕ್ಕಿಂತ ಚಿಕ್ಕ ಸಂಖ್ಯೆಯನ್ನು ಪಡೆಯುವುದು. | 1,2,3,4,5 | 5 | $\frac{5}{10} = \frac{1}{2}$ |
| (c) 6ಕ್ಕಿಂತ ಹೆಚ್ಚಿನ ಸಂಖ್ಯೆಯನ್ನು ಪಡೆಯುವುದು. | 7,8,9,10 | 4 | $\frac{4}{10} = \frac{2}{5}$ |
| (d) ಒಂದಂಕಿಯ ಸಂಖ್ಯೆಯನ್ನು ಪಡೆಯುವುದು. | 1 ರಿಂದ 9 | 9 | $\frac{9}{10}$ |

10.3.5. ಒಂದು ಚಕ್ರದಲ್ಲಿ ಮೂರು ಹಸಿರು ಖಂಡಗಳು, ಒಂದು ನೀಲಿ ಖಂಡ ಮತ್ತು ಒಂದು ಕೆಂಪು ಖಂಡವಿದೆ. ಇದನ್ನು ತಿರುಗಿಸಿದಾಗ ಹಸಿರು ಖಂಡದ ಮೇಲೆ ಮುಳ್ಳು ನಿಲ್ಲುವ ಸಂಭವನೀಯತೆ ಎಷ್ಟು? ನೀಲಿ ಅಲ್ಲದ ಖಂಡದ ಮೇಲೆ ನಿಲ್ಲುವ ಸಂಭವನೀಯತೆ?

ಒಟ್ಟು ಖಂಡಗಳು: ಮೂರು ಹಸಿರು, ಒಂದು ನೀಲಿ & ಒಂದು ಕೆಂಪು=5

ಚಕ್ರವನ್ನು ತಿರುಗಿಸಿದಾಗ ಮುಳ್ಳು ನಿಲ್ಲಬಹುದಾದ ಖಂಡಗಳು: ಹಸಿರು,ಹಸಿರು,ಹಸಿರು,ನೀಲಿ,ಕೆಂಪು.

| ಪ್ರಯೋಗ | ಸಾಧ್ಯತೆಗಳ ಸಂಖ್ಯೆ | ಸಂಭವನೀಯತೆ |
|---|---|---|
| (a) ಹಸಿರು ಖಂಡದ ಮೇಲೆ ಮುಳ್ಳು ನಿಲ್ಲುವುದು. | 3(ಹಸಿರು 3 ಬಾರಿ) | $\frac{3}{5}$ |
| (b) ನೀಲಿ ಅಲ್ಲದ ಖಂಡದ ಮೇಲೆ ಮುಳ್ಳು ನಿಲ್ಲುವುದು. | 3+1=4(ಹಸಿರು 3 ಬಾರಿ+ಕೆಂಪು 1 ಬಾರಿ) | $\frac{4}{5}$ |

A Project of www.eShale.org

10.3.6. 1 ರಿಂದ 6 ಸಂಖ್ಯೆಗಳಿರುವ ದಾಳವನ್ನು ಉರುಳಿಸಿದಾಗ, ಕೆಳಗಿನ ಘಟನೆಗಳ ಸಂಭವನೀಯತೆಯನ್ನು ಕಂಡುಹಿಡಿಯಿರಿ.

ದಾಳವನ್ನು ಉರುಳಿಸಿದಾಗ ಬರಬಹುದಾದ ಫಲಿತಾಂಶ: 1,2,3,4,5 & 6. .( ಒಟ್ಟು ಘಟನೆಗಳು=6)

| ಪ್ರಯೋಗ/ಘಟನೆ | ಆ ಸಂಖ್ಯೆಗಳು ಯಾವುವು | ಸಾಧ್ಯತೆಗಳ ಸಂಖ್ಯೆ | ಸಂಭವನೀಯತೆ |
|---|---|---|---|
| (a) ಅವಿಭಾಜ್ಯ ಸಂಖ್ಯೆಗಳು ಬೀಳುವುದು. | 2,3 & 5 | 3 | $\frac{3}{6}=\frac{1}{2}$ |
| (b) ಅವಿಭಾಜ್ಯವಲ್ಲದ ಸಂಖ್ಯೆಗಳು ಬೀಳುವುದು. | 1 ,4 & 6 | 3 | $\frac{3}{6}=\frac{1}{2}$ |
| (c) 5 ಕ್ಕಿಂತ ಹೆಚ್ಚಿನ ಸಂಖ್ಯೆಗಳು ಬೀಳುವುದು. | 6 | 1 | $\frac{1}{6}$ |
| (d) 5 ಕ್ಕಿಂತ ಹೆಚ್ಚಲ್ಲದ ಸಂಖ್ಯೆಗಳು ಬೀಳುವುದು. | 1,2,3,4 & 5 | 5 | $\frac{5}{6}$ |

A Project of www.eShale.org